ಕರ್ನಾಟಕ ಸರ್ಕಾರ

(ಕೃಷಿ ಇಲಾಖೆ)

ಸಂಖ್ಯೆ: ಸಾಗೊವಿ/ದಕ/68/ಇ-ಟೆ/2021-22

ಕೃಷಿ ಆಯುಕ್ತಾಲಯ,
ಶೇಷಾದ್ರಿ ರಸ್ತೆ, ಬೆಂಗಳೂರು-1,
ದಿನಾಂಕ: 17.10.2022.

# ದರ ಕರಾರು 2022-23 (ಸುತ್ತೋಲೆ-4)

**ವಿಷಯ:** 2022-23ನೇ ಸಾಲಿನ ಕೃಷಿ ಇಲಾಖೆಯಲ್ಲಿ ಜೈವಿಕ ಗೊಬ್ಬರಗಳು, ಲಘುಪೋಷಕಾಂಶಗಳು, ಸಾವಯವ ಗೊಬ್ಬರಗಳು, ಹಸಿರೆಲೆ ಗೊಬ್ಬರ ಬೀಜಗಳು, ಮಣ್ಣು ಸುಧಾರಕಗಳು, ಖಾದ್ಯವಲ್ಲದ ಎಣ್ಣೆ ರಹಿತ ಹಿಂಡಿ ಗೊಬ್ಬರಗಳು ಮತ್ತು ಸಿಟಿ ಕಾಂಪೋಸ್ಟ್(Bulk Supply) ಸರಬರಾಜಿಗಾಗಿ ದರ ಪಟ್ಟಿ ನಿಗಧಿಪಡಿಸುವ ಬಗ್ಗೆ.

**ಉಲ್ಲೇಖ:** 1. ಇಲಾಖೆಯ ಟೆಂಡರ್ ನೋಟಿಫಿಕೇಷನ್ ನಂ: MNR/e-Tender/Inputs/68/2021-22, ದಿನಾಂಕ: 03.02.2022.

2. ಇದೇ ಸಮ ಸಂಖ್ಯೆಯ ದರ ಕರಾರು 2022-23 ಸುತ್ತೋಲೆ ದಿನಾಂಕ: 07.05.2022, 17.05.2022 ಮತ್ತು 02.09.2022

3. ಇದೇ ಸಮ ಸಂಖ್ಯೆಯ ಅಂಗೀಕಾರ ಪ್ರಾಧಿಕಾರ ಸಮಿತಿ ಸಭೆಯ ನಡವಳಿ ದಿನಾಂಕ: 13.10.2022

**********

2022-23 ನೇ ಸಾಲಿನಲ್ಲಿ ಕೃಷಿ ಇಲಾಖೆಯ ವಿವಿಧ ಯೋಜನೆಗಳ ಅನುಷ್ಠಾನಕ್ಕಾಗಿ ಅವಶ್ಯವಾಗಿ ಬೇಕಾಗಿರುವ ಸಿಟಿ ಕಾಂಪೋಸ್ಟ್(Bulk Supply) ಅನ್ನು ಅನುಮೋದಿತ ಸಂಸ್ಥೆಯಿಂದ ಸರಬರಾಜು ಪಡೆಯಲು ದರಪಟ್ಟಿಯನ್ನು ನಿಗಧಿಪಡಿಸಲಾಗಿದೆ. ಉಲ್ಲೇಖಿತ ದರ ಕರಾರು 2022-23 (ಸುತ್ತೋಲೆ-1) ದಿನಾಂಕ: 07.05.2022, ದರ ಕರಾರು 2022-23 (ಸುತ್ತೋಲೆ-2) ದಿನಾಂಕ: 17.05.2022 ಮತ್ತು ದರ ಕರಾರು 2022-23 (ಸುತ್ತೋಲೆ-3) ದಿನಾಂಕ: 02.09.2022 ಮಾರ್ಗಸೂಚಿಯ ಮುಂದುವರೆದ ಭಾಗವಾಗಿ ಸಿಟಿ ಕಾಂಪೋಸ್ಟ್ (BULK SUPPLY) ಗೊಬ್ಬರವನ್ನು ದರ ಪರಾಮರ್ಶೆಗೆ ಒಳಪಡಿಸಿ ಪರಿಷ್ಕರಿಸಲಾದ L1 ದರಗಳನ್ನು ಪರಿಕರಗಳನ್ನು ಅನುಮೋದಿತ ಸಂಸ್ಥೆಯಿಂದ ಸರಬರಾಜು ಪಡೆಯಲು ದರಪಟ್ಟಿಯನ್ನು ನಿಗಧಿಪಡಿಸಲಾಗಿದೆ.

- 2022-23 ನೇ ಸಾಲಿನಲ್ಲಿ ಸಿಟಿ ಕಾಂಪೋಸ್ಟ್(Bulk Supply)ನ್ನು ದೊಡ್ಡ ಪ್ರಮಾಣದಲ್ಲಿ ನೇರವಾಗಿ ರೈತರ ಜಮೀನಿಗೆ ಸರಬರಾಜು ಮಾಡುವ ಇಲಾಖೆಯ ಕಾರ್ಯಕ್ರಮದಲ್ಲಿ ಅನುಮೋದಿತ ಸಂಸ್ಥೆಯಿಂದ ಸರಬರಾಜು ಪಡೆಯಲು ದರಪಟ್ಟಿಯನ್ನು ನಿಗಧಿಪಡಿಸಲಾಗಿದೆ. L1 ದರಕ್ಕೆ ಸರಬರಾಜು ಮಾಡಲು ಒಪ್ಪಿ ಎಂಪ್ಯಾನಲ್ ಮಾಡಿದ ಅನುಮೋದಿತ ಸರಬರಾಜುದಾರರ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.
- ರೈತ ಸಂಪರ್ಕ ಕೇಂದ್ರಗಳಲ್ಲಿ ರೈತರು ನೀಡುವ ಅಗತ್ಯದ ಬೇಡಿಕೆಯಂತೆ, ರೈತರ ಹೆಸರನ್ನು ನೋಂದಣಿ ಮಾಡಿಸಿ, ನೋಂದಾಯಿಸಿದ ರೈತರ ವಿವರಗಳನ್ನು ಇಂಡೆಂಟ್‌ನೊಂದಿಗೆ ಅರ್ಹ ಸರಬರಾಜುದಾರರಿಗೆ ನೀಡಿ, ಸರಬರಾಜುದಾರರಿಂದ ಸಿಟಿ ಕಾಂಪೋಸ್ಟ್(Bulk supply)ಅನ್ನು ರೈತರ ಜಮೀನಿಗೆ ನೇರವಾಗಿ ಸರಬರಾಜು ಮಾಡುವುದು.
- ಸಿಟಿ ಕಾಂಪೋಸ್ಟ್(Bulk Supply)ಸರಬರಾಜುವಿನ ಪ್ರಮಾಣಕ್ಕೆ ರೈತ ಸಂಪರ್ಕ ಕೇಂದ್ರದ ಶೇ 4 ರಷ್ಟು ಸೇವಾ ಶುಲ್ಕವು ಅನ್ವಯಿಸುವುದಿಲ್ಲ.
- ಪ್ರಸ್ತುತ ನಿಗಧಿಪಡಿಸಿರುವ ಮೇಲ್ಕಂಡ ಪರಿಕರಗಳ ದರಗಳು ದಿನಾಂಕ: **31.03.2023** ರವರೆಗೆ ಜಾರಿಯಲ್ಲಿರುತ್ತದೆ.

**2022-23 ನೇ ಸಾಲಿನ ವಿವಿಧ ಕೃಷಿ ಪರಿಕರಗಳ ಸರಬರಾಜಿಗೆ ಸಂಬಂಧಿಸಿದಂತೆ, ಅನುಮೋದಿತ ದರ ಹಾಗೂ ಸರ್ಕಾರದಿಂದ ನೀಡಲಾಗುವ ರಿಯಾಯಿತಿ ದರಗಳ ವಿವರ ಈ ಕೆಳಗಿನಂತಿದೆ.**

| ಕ್ರ. ಸಂ | ಪರಿಕರದ ಹೆಸರು | ಅನುಮೋದಿತ ಮಾರಾಟ ದರ (ಪ್ರತಿ ಟನ್ ಗೆ) | ಪ್ರತಿ ಟನ್ ಗೆ ಶೇ.50ರ ರಿಯಾಯತಿ ದರ | | ಪ್ರತಿ ಟನ್ ಗೆ ಶೇ.75ರ ರಿಯಾಯತಿ ದರ | |
|---|---|---|---|---|---|---|
| | | | ಸಹಾಯ ಧನ | ರೈತರ ವಂತಿಕೆ | ಸಹಾಯ ಧನ | ರೈತರ ವಂತಿಕೆ |
| 1 | ಸಿಟಿ ಕಾಂಪೋಸ್ಟ್ (Bulk Supply) | ರೂ.3700/- | 1850.00 | 1850.00 | 2775.00 | 825.00 |

ದರ ಕರಾರು 2021-22ರ ಸುತ್ತೋಲೆ(1), ಸುತ್ತೋಲೆ(2) ಮತ್ತು ಸುತ್ತೋಲೆ(3) ರಲ್ಲಿ ತಿಳಿಸಿರುವ ಎಲ್ಲಾ ಅಂಶಗಳನ್ನೂ ಗಮನದಲ್ಲಿಟ್ಟುಕೊಂಡು, ಇಲಾಖೆಯ ಕಾರ್ಯಕ್ರಮಗಳನ್ನು ಸಕಾಲದಲ್ಲಿ ಯಶಸ್ವಿಯಾಗಿ ಅನುಷ್ಠಾನ ಮಾಡಲು ಕ್ರಮ ಕೈಗೊಳ್ಳುವಂತೆ ಸೂಚಿಸಿದೆ. ಮುಂದುವರೆದು, ವಿವಿಧ ಕೃಷಿ ಪರಿಕರಗಳ ಪೂರೈಕೆಯಲ್ಲಿ ಯಾವುದೇ ಸಮಸ್ಯೆ ಉಂಟಾಗದಂತೆ ಅನುಬಂಧ-1 ರಲ್ಲಿನ ಸರಬರಾಜುದಾರರಿಂದ ಪರಿಕರಗಳನ್ನು ಪಡೆದು ರೈತರಿಗೆ ವಿತರಿಸಲು ಕ್ರಮ ಕೈಗೊಳ್ಳುವುದು.

ಕೃಷಿ ನಿರ್ದೇಶಕರು

ಪ್ರತಿಯನ್ನು:

1. ಅಪರ ಮುಖ್ಯ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬಹುಮಹಡಿಗಳ ಕಟ್ಟಡ,ಬೆಂಗಳೂರು ಇವರ ಅವಗಾಹನೆಗೆ ಸಲ್ಲಿಸಿದೆ.
2. ಅಪರ ಕೃಷಿ ನಿರ್ದೇಶಕರು (ಸಾವಯವ ಕೃಷಿ)/(ಮಾನವ ಸಂಪನ್ಮೂಲ ಅಬಿ಼ವೃದ್ಧಿ)/(ಬೆಳೆ ಅಭಿವೃದ್ಧಿ ಮತ್ತು ಯೋಜನೆ) ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
3. ಎಲ್ಲಾ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾದಿ಼ಕಾರಿಗಳಿಗೆ ಮಾಹಿತಿಗಾಗಿ ಕಳುಹಿಸಿದೆ
4. ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
5. ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಆರ್ಥಿಕ ಸಲಹೆಗಾರರು, ಕೃಷಿ ಆಯುಕ್ತಾಲಯ,
6. ಪ್ರತಿಯನ್ನು ಎಲ್ಲಾ ಜಿಲ್ಲಾ ನೋಡಲ್ ಅಧಿಕಾರಿಗಳ ಮಾಹಿತಿಗಾಗಿ
7. ಕೃಷಿ ಆಯುಕ್ತರ ಆಪ್ತ ವಿಭಾಗಕ್ಕೆ ಮಾಹಿತಿಗಾಗಿ
8. ಕೃಷಿ ನಿರ್ದೇಶಕರು ರವರ ಆಪ್ತ ವಿಭಾಗಕ್ಕೆ ಮಾಹಿತಿಗಾಗಿ
9. ಪ್ರತಿಯನ್ನು ಸಂಬಂಧಿಸಿದ ಸಂಸ್ಥೆಯವರಿಗೆ ಕಳುಹಿಸುತ್ತಾ ನಿಮ್ಮ ಸಂಸ್ಥೆಯು ಪೂರೈಸುವ ವಿವಿಧ ಕೃಷಿ ಪರಿಕರಗಳ ಸರಬರಾಜಿಗೆ ಸಂಬಂಧಿಸಿದಂತೆ ಜಂಟಿ ಕೃಷಿ ನಿರ್ದೇಶಕರು ನೀಡುವ ಮಾಹಿತಿ ಮೇರೆಗೆ ಸರಬರಾಜು ಮಾಡಿ, ಸರಬರಾಜು ಬಗ್ಗೆ ವಾರಕ್ಕೊಮ್ಮೆ ನಿಗಧಿತ ನಮೂನೆಯಲ್ಲಿ ಅನುಬಂಧ-5 ರಲ್ಲಿ ವರದಿಯನ್ನು ತಪ್ಪದೇ ಈ ಕಛೇರಿಗೆ ನೀಡುವಂತೆ ಸೂಚಿಸಿದೆ.

# ಅನುಬಂಧ-1

## 2022-23 ನೇ ಸಾಲಿಗೆ ಪರಿಕರವಾರು ಅನುಮೋದಿತ ಸರಬರಾಜುದಾರರ ವಿವರಗಳು ಈ ಕೆಳಗಿನಂತೆ ಇರುತ್ತವೆ.

### 1.0 ಸಾವಯವ ಗೊಬ್ಬರ:

### 1.1. ಸಿಟಿ ಕಾಂಪೋಸ್ಟ್ (Bulk Supply):

| ಕ್ರ. ಸಂ | ಸರಬರಾಜು ಮಾಡಲು ಅರ್ಹತೆ ಪಡೆದಿರುವ ಸಂಸ್ಥೆಯ ಹೆಸರು | ಮೂಲ ಸರಬರಾಜು |
|---|---|---|
| **1** | **M/s.Amruth Organic Fertilizers, Chitradurga(L1)** | **Own Bulk Supply** |
| 2 | M/s.MSGP Infratech Pvt Ltd., Bangalore | Own Bulk Supply |
| 3 | M/s.Karnataka City Compost Development Corporation, Bangalore | Own Bulk Supply: KTPP 2000 4(G) Excemption from Government. |

# ಅನುಬಂಧ-2

## ಅನುಮೋದಿತ ಸರಬರಾಜುದಾರರ ಹೆಸರು, ವಿಳಾಸ, ಸಂಪರ್ಕಿಸಬೇಕಾದವರ ಹೆಸರು, ದೂರವಾಣಿ ಸಂಖ್ಯೆ ಮತ್ತು ಇ-ಮೇಲ್ ವಿವರ ಈ ಕೆಳಗಿನಂತೆ ಇರುತ್ತವೆ.

| ಕ್ರ.ಸಂ. | ಸರಬರಾಜು ಮಾಡಲು ಅರ್ಹತೆ ಪಡೆದಿರುವ ಸಂಸ್ಥೆಯ ಹೆಸರು | ಸರಬರಾಜು ಸಂಸ್ಥೆಯ ವಿಳಾಸ | ಸಂಪರ್ಕಿಸಬೇಕಾದವರ ಹೆಸರು ಮತ್ತು ದೂರವಾಣಿ ಸಂಖ್ಯೆ |
|---|---|---|---|
| 1 | Amruth Organic Fertilizers, Chitradurga | Amruth Organic Fertilizers Malladihalli, Holalkere Talulk, Chitradurga District - 577531, | 9900066307<br>9448019452<br>amruth.organic@gmail.com<br>K. Nagaraj |
| 2 | MSGP Infratech Pvt Ltd., Bangalore | MSGP Infratech Pvt Ltd., 1 0/4/ 1 . Kumara Krupa Road, Opp. ( hitrakala Parishath, Bangalore-560001 | 080-22266769<br>7349769776<br>nithya@msgp.co.in<br>Shivakumar B H |
| 3 | Karnataka Compost Development Corporation, Bangalore | Karnataka Compost Development Corporation, Haralukunte, Hosur Road, Bangalore-560068 | 080-25730649<br>9480683433/9108002671<br>mdkcdc@gmail.com<br>Managing Director |

ಕೃಷಿ ನಿರ್ದೇಶಕರು

**************